**ದಿನಾಂಕಃ 24.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 2ನೇ ಆರೋಪಿ ಪರ ಶ್ರೀ. ಪಿ ಕೆ ವಿ ವಕೀಲರಿಂದಃ-**

1. ತಮ್ಮ ಮನೆಯಲ್ಲಿ ಒಡವೆ ಮತ್ತು ಟ್ಯಾಬ್ ಕಳ್ಳತನ ಆಗಿದೆ ಎಂದು ಪೊಲೀಸ್ ಠಾಣೆಗೆ ಯಾರು ಬರೆದು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಖುದ್ದು ಪೊಲೀಸ್ ಠಾಣೆಯಲ್ಲಿ ಬರೆಸಿದ್ದೇನೆ ಎನ್ನುತ್ತಾರೆ. ದೂರಲ್ಲಿ ಏನು ಬರೆದಿದೆ ಎಂದು ತಮಗೆ ಗೊತ್ತಾ ಎಂದರೆ ಸಾಕ್ಷಿ ತಮ್ಮ ಮನೆಯಲ್ಲಿ ಕಳ್ಳತನ ಆದ ಬಗ್ಗೆ ಬರೆದಿದೆ ಎನ್ನುತ್ತಾರೆ. ಪಿರ್ಯಾದಿನಲ್ಲಿ 20 ಗ್ರಾಂ ಚಿನ್ನದ ನೆಕ್ಲೇಸ್, 25ಗ್ರಾಂ ತೂಕದ 5 ಜೊತೆ ಕಿವಿ ಓಲೆಗಳು, 100 ಗ್ರಾಂ ತೂಕದ ಬೆಳ್ಳಿಯ ಒಡವೆಗಳು ಮತ್ತು ಒಂದು ಟ್ಯಾಬ್ ಎಂದು ಬರೆದಿದೆ ಎಂದರೆ ಸರಿ. ತಮ್ಮ ಮನೆಯಲ್ಲಿ ಕಳ್ಳತನ ಆಗಿರುವುದಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ತಮ್ಮ ಬಳಿ ತಾವು ಪಿರ್ಯಾದಿನಲ್ಲಿ ತೋರಿಸಿರುವ ಒಡವೆ ವಸ್ತುಗಳು ಮತ್ತು ಟ್ಯಾಬ್ ಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪೊಲೀಸರ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಟ್ಯಾಬ್ ಖರೀದಿ ಮಾಡಿದ್ದ ಬಗ್ಗೆ ದಾಖಲೆಯನ್ನು ಪೊಲೀಸರಿಗೆ ನೀಡಿದೆದ, ಆದರೆ ಒಡವೆಗಳನ್ನು ತುಂಬಾ ವರ್ಷಗಳ ಹಿಂದೆ ಖರೀದಿ ಮಾಡಿದ್ದರಿಂದ ಅವುಗಳ ರಶೀದಿ ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿತರಿಂದ ನನ್ನ ಸಮಕ್ಷಮ ಯಾವುದೇ ಒಡವೆಗಳನ್ನು ಮತ್ತು ಟ್ಯಾಬ್ ನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಕೇಸಿನ ಮಾಲು ಪಟ್ಟಿ ಯಲ್ಲಿ ಅಮಾನತ್ತು ಪಡಿಸಿಕೊಂಡಿರುವ ಒಡವೆ ವಸ್ತ್ರಗಳನ್ನು ಮತ್ತು ಟ್ಯಾಬ್ ನ್ನು ಆರೋಪಿತರಿಂದ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

1ನೇ ಆರೋಪಿ ಪರ ವಕೀಲರಾದ ಶ್ರೀ. ಬಿ ಎನ್ ಎಸ್ ರವರು 2ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ತಮ್ಮ ಪಾಟೀ ಸವಾಲೆಂದು ಅಳವಡಿಸಿಕೊಳ್ಳಲು

ಕೋರಿದ್ದು, ಕೋರಿಕೆಯ ಮೇರೆಗೆ 2ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನೇ 1ನೇ ಆರೋಪಿ ಪರ ಪಾಟೀ ಸವಾಲು ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ